ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

" **ಅಭಿವೃದ್ಧಿ ಭವನ** " ಐವಾನ-ಎ-ಶಾಹಿ, ಕಲಬುರಗಿ - 585 102

ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527

E-mail : hkadbgulb@gmail.com, hkrdbklb@gmail.com Website : hkrdb.kar.nic.in

**ಸಂಖ್ಯೆ:ಯೋಜನೆ/ಮ್ಯಾಕ್ರೋ/ಸಾಮನ್ಯ/46/2017-18** 1222 **ದಿನಾಂಕ: 30-08-2017**

5-9

## ಸುತ್ತೋಲೆ

ವಿಷಯ: ಹೈ.ಕ.ಪ್ರ.ಅ.ಮಂಡಳಿಯಿಂದ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳು ಬದಲಾವಣೆ ಮಾಡುವ ಕುರಿತು.

ಉಲ್ಲೇಖ: ಮಂಡಳಿಯ ಸುತ್ತೋಲೆ ಸಂಖ್ಯೆ: ಹೈಕಮಂ/ಯೋಶಾ/ಕ್ರಿಯೋ/ಸಾಮನ್ಯ/46/2017-18/960 ದಿನಾಂಕ: 7/10-7-2017

*****

ಹೈದ್ರಾಬಾದ ಕರ್ನಾಟ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕ್ರಿಯಾ ಯೋಜನೆಯಲ್ಲಿ ಅನುಮೊದನೆಯಾದ ಈ ಕಾಮಗಾರಿಗಳ ಸ್ಥಳ ಬದಲಾವಣೆ ಮಾಡುವ ಅಧಿಕಾರವನ್ನು ಉಲ್ಲೇಖ(1) ರನ್ವಯ ಜಿಲ್ಲಾಧಿಕಾರಿಗಳಿಗೆ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಲಾಗಿದೆ. ಸ್ಥಳ ಬದಲಾವಣೆ ಮಾಡುವಾಗ ಅ ಕಾಮಗಾರಿಗೆ ಸಂಬಂಧಿಸಿದ ಇಲಾಖಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ಸ್ಥಳ ಬದಲಾವಣೆ ಮಾಡಿದ ನಂತರ ಮಂಡಳಿಗೆ ವರದಿ ಸಲ್ಲಿಸುವುದು. ಯಾವುದೇ ಕಾರಣಕ್ಕೆ ಈ ಅವಕಾಶವನ್ನು ಬಳಸಿ ಕಾಮಗಾರಿಗಳ ಸ್ವರೂಪವನ್ನು ಬದಲಾವಣೆ ಮಾಡತಕ್ಕದ್ದಲ್ಲ ಅಂದರೆ ಈ ಅವಕಾಶದ ಅಡಿಯಲ್ಲಿ ಕೇವಲ ಒಂದು ಸ್ವರೂಪದ ಕಾಮಗಾರಿಯ ಸ್ಥಳ ಬದಲಾವಣೆಯನ್ನು ಮಾತ್ರ ಮಾಡಬಹುದಾಗಿದೆ ಉಳಿದ ಎಲ್ಲಾ ರೀತಿಯ ಬದಲಾವಣೆಗಳಿಗೆ ಮಂಡಳಿಯಿಂದ ಅನುಮೊದನೆ ಪಡೆಯತಕ್ಕದ್ದು ಎಂದು ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ. ಅಲ್ಲದೇ ಉಲ್ಲೇಖಿತ ಸುತ್ತೋಲೆನ್ವಯ **ರಸ್ತೆ ಕಾಮಗಾರಿಗಳನ್ನು ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ.**

ಪ್ರಯುಕ್ತ ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಿರುವಂತೆ ಕಟ್ಟಡ ಸ್ವರೂಪದ ಕಾಮಗಾರಿಗಳು ಮಾತ್ರ ಬದಲಾವಣೆ ಕೈಗೊಳ್ಳಲು ಹಾಗೂ ಕಟ್ಟಡ ಕಾಮಗಾರಿಗಳು ಹೊರತು ಪಡಿಸಿ ಇತರೆ ಎಲ್ಲಾ ಕಾಮಗಾರಿಗಳ ಬದಲಾವಣೆಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಮಂಡಳಿಯಿಂದ ಅನುಮೋದನೆ ಪಡೆಯಲು ತಿಳಿಸಲಾಗಿದೆ.

8-9-17

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ

1. ಎಲ್ಲಾ ಜಿಲ್ಲಾಧಿಕಾರಿಗಳು, ಹೈ.ಕ.ವಿಭಾಗ,
2. ಎಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹೈ.ಕ.ವಿಭಾಗ
3. ಎಲ್ಲಾ ಅನುಷ್ಠಾನ ಅಧಿಕಾರಿಗಳು, ಹೈ.ಕ.ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.